**ಸಾಕ್ಷಿಯನ್ನು ದಿನಾಂಕ 06-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ವಾದಿಗಳ ಪರ ವಕೀಲರಾದ ಶ್ರೀ ಎಂ. ಎಲ್. ನಾಯ್ಕರಿಂದಃ**

ನನ್ನ ಲಿಖಿತ ತಕರಾರಿನಲ್ಲಿ ವಂಶಾವಳಿಯನ್ನು ತೋರಿಸಿಲ್ಲ. ವಾದಿಯರು ತೋರಿಸಿರುವ ವಂಶಾವಳಿ ಸರಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ನಾನು ನೋಡಿಲ್ಲ. ನಾನು 8 ನೇ ತರಗತಿವರೆಗೆ ಓದಿದ್ದೇನೆ. ನಮ್ಮ ಕವಲಿನಲ್ಲಿ ನನ್ನ ಅಣ್ಣ ಜುಜೆ ಫಾಸ್ಕಲ್ ಡಯಾಸ್ ಹಿರಿಯ ವ್ಯಕ್ತಿ. ನನಗಿಂತ ಹೆಚ್ಚಿನ ವಿಚಾರ ಆತನಿಗೆ ಗೊತ್ತಿಲ್ಲ. ನಾನು 1981ರಲ್ಲಿ ಹುಟ್ಟಿರುತ್ತೇನೆ. ವಾದಿಯು ಹಾಜರುಪಡಿಸಿರುವ ದಾಖಲೆಗಳಲ್ಲಿ ಇಂತ್ರು ಫಾಸ್ಕಲ್ ಡಯಾಸ್ ಹೆಸರು ಇದೆ ಆದರೆ ಅದು ಸರಿಯಲ್ಲ. ಫಾಸ್ಕಲ್ ಇಂತ್ರು ಡಯಾಸ್ ಆಗಬೇಕು. ಇಂತ್ರು ಫಾಸ್ಕಲ್ ಡಯಾಸ್ ನಮ್ಮ ಮತ್ತು ವಾದಿಯರ ಕುಟುಂಬದ ಮೂಲ ಪುರುಷ ಎಂದರೆ ಸರಿ. ಆದರೆ ಸ್ವತ್ತುಗಳು ಅವರಿಗೆ ಸೇರಿದ್ದಲ್ಲ ಎನ್ನುತ್ತಾರೆ. ಭೂ ನ್ಯಾಯ ಮಂಡಳಿಗೆ ನಮ್ಮ ತಂದೆ ಅರ್ಜಿ ಸಲ್ಲಿಸಿದ್ದಾರೆ. ನಮ್ಮ ತಂದೆ ಇಂತ್ರು ಫಾಸ್ಕಲ್ ಡಯಾಸ್‌ರವರ ಹಿರಿಯ ಮಗ ಎಂದರೆ ಸರಿ. ನಮ್ಮ ತಂದೆಗೆ 2 ಜನ ಹೆಂಡತಿಯರು ಎಂದರೆ ಸರಿ. ನನ್ನ ಅಜ್ಜನ 2 ನೇ ಮಗನ ಹೆಸರು ರುಜಾರ್. ವಿನ್ಸಿ ಜುವಾಂವ್ ಮತ್ತು ನಾತಲ್ ನನ್ನ ಅಜ್ಜನ ಮಕ್ಕಳು. ನನ್ನ ತಂದೆ ಮತ್ತು ಆತನ ತಮ್ಮ ತಂಗಿಯರು ಜೀವಂತವಾಗಿಲ್ಲ. ನಮ್ಮ ತಂದೆಯ ಮೊದಲನೇ ಹೆಂಡತಿಯ ಹೆಸರು ಆಶೇಷಾ, 2 ನೇ ಹೆಂಡತಿ ರೊಮಾನ್.

ಮೊದಲನೇ ಹೆಂಡತಿಯ ಮೂಲಕ ನನ್ನ ತಂದೆಗೆ ಅಂತೋನ್, ಸಂತೋಲಿನ್, ಫರಾಸ್ಕ, ಕತರ್ನಿ, ಅಂತಿಕ್, ನಾತಲ್, ಅನಮೋರಿ ಮತ್ತು ಇಂತ್ರು ಎನ್ನುವ 8 ಜನ ಮಕ್ಕಳು ಎಂದರೆ ಸರಿ. ಅವರ ಪೈಕಿ ಅಂತೋನ್ ವಿವಾಹ ಆಗದೇ ಮಕ್ಕಳಿಲ್ಲದೇ ಮೃತಪಟ್ಟಿದ್ದಾನೆ. 4 ನೇ ಮಗಳು ಕತರ್ನಿ ಮೃತಪಟ್ಟಿದ್ದು ಆಕೆಗೆ 3 ನೇ ಪ್ರತಿವಾದಿ ಜೋನ್ ಮಗ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಕತರ್ನಿಗೆ 3 ಜನ ಮಕ್ಕಳಿದ್ದು

ಅವರೆಂದರೆ ಜೋನ್, ದಿಲೀಪ್ ಮತ್ತು ಮುಂತಿ. ನಮ್ಮ ದೊಡ್ಡ ಅಣ್ಣ ಇಂತ್ರು ಮೃತಪಟ್ಟಿದ್ದು ಆತನಿಗೆ 3 ಜನ ಹೆಣ್ಣು ಮಕ್ಕಳು 7 ನೇ ಪ್ರತಿವಾದಿ ಜಾನ್ಸನ್ ಮಗ. ಹೆಣ್ಣು ಮಕ್ಕಳು ಎಂದರೆ ಆಶಿಷ್, ಸೆಲಿನ್ ಮತ್ತು ರೂಬಿ.

ನಮ್ಮ ತಂದೆಯ 2 ನೇ ಹೆಂಡತಿಗೆ ಜುಜೆ, ಸಿರಿಲ್, ಲಾದ್ರು, ಆಗ್ನೇಲ್, ನಾನು ಪ್ರಕಾಶ, ಸುರೇಶ ಮತ್ತು ರೋಜಿ ಎನ್ನುವ 7 ಜನ ಮಕ್ಕಳು ಎಂದರೆ ಸರಿ. 1 ನೇ ವಾದಿ ಆನಾ ನನ್ನ ಚಿಕ್ಕಪ್ಪ ರುಜಾರ್ ಅವರ ಹೆಂಡತಿ ಎಂದರೆ ಸರಿ. 2 ರಿಂದ 6 ನೇ ವಾದಿ ಮತ್ತು ಮೃತ ರೆಮೆಂದ್ ಆಕೆಯ ಮಕ್ಕಳು ಎಂದರೆ ಸರಿ. ಮೃತ ರೆಮೆಂದ್ ಗೆ 7 ನೇ ವಾದಿ ಮಗ ಎಂದರೆ ಸರಿ.

ನನ್ನ ತಂದೆಯ ತಂಗಿ ವಿನ್ಸಿ ಮೃತಪಟ್ಟಿದ್ದು ಆಕೆಯ ಗಂಡ ಮತ್ತು ಮಕ್ಕಳು ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯ ಇನ್ನೊಬ್ಬ ತಂಗಿ ಜುವಾನ್ ಮೃತಪಟ್ಟಿದ್ದು ಆಕೆಯ ಗಂಡ ಪಾವ್ಲು ಮತ್ತು ಮಗ ಕೊಸ್ತಾಂವ್ ಸಹ ಮೃತಪಟ್ಟಿದ್ದಾರೆ. ಕೊಸ್ತಾಂವ್‌ಗೆ 2 ಜನ ಗಂಡು ಮಕ್ಕಳು, ಒಂದು ಹೆಣ್ಣುಮಗು ಅವರೆಂದರೆ ಅಶೋಕ, ಸುನಿಲ್, ಮಿನಾ.

ನಮ್ಮ ತಂದೆಯ ಕೊನೆಯ ತಂಗಿ ನತಾಲ್ ಸಹ ಮೃತಪಟ್ಟಿದ್ದು ಆಕೆಗೆ 15 ರಿಂದ 18 ನೇ ಪ್ರತಿವಾದಿಯರಾದ ಲಿಯಾನ್, ಸೈರಿನ್, ರಾಯು ಮತ್ತು ಮೋಹನ ಮಕ್ಕಳು ಎಂದರೆ ಸರಿ. ಮೇಲೆ ಹೇಳಿದ ವಂಶಾವಳಿಯನ್ನು ವಾದಿ ದಾವೆಯಲ್ಲಿ ತೋರಿಸಿದ್ದಾರೆ ಎಂದರೆ ಸರಿ.

ದಾವಾ ಸ್ವತ್ತುಗಳನ್ನು ನಮ್ಮ ತಂದೆಗೂ ಮೊದಲು ಯಾರು ಉಳುಮೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯ ಜೊತೆಯಲ್ಲಿ ಚಿಕ್ಕಪ್ಪಂದಿರೂ ಸಹ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ನಮ್ಮ ಕುಟುಂಬದ ಪಡಿತರ ಚೀಟಿಯನ್ನು ಹಾಜರುಪಡಿಸಿಲ್ಲ. ನನ್ನ ಅಜ್ಜ ಇಂತ್ರು ಫಾಸ್ಕಲ್ ಡಯಾಸ್ ಜೊತೆಯಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪಂದಿರೆಲ್ಲರೂ ದಾವಾ ಸ್ವತ್ತುಗಳನ್ನು ಉಳುಮೆ ಮಾಡುತ್ತಿದ್ದರೂ ಸಹ ನಾನು ನಮ್ಮ ತಂದೆ ಒಬ್ಬರೇ ಉಳುಮೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬದವರು ಮಾಡಿಕೊಂಡಿರುವ ವಿಭಾಗಕ್ಕೆ ವಾದಿಯರ ಕವಲಿನವರು ಪಕ್ಷಗಾರರಲ್ಲ ಮತ್ತು ಅವರಿಗೆ ಯಾವುದೇ ಹಿಸ್ಸೆ ಕೊಟ್ಟಿರುವುದಿಲ್ಲ. ಅವರ ಹೆಸರಿನಲ್ಲಿ ಸ್ವತ್ತು ಇಲ್ಲವಾದ್ದರಿಂದ ಅವರಿಗೆ ಯಾವುದೇ ಹಿಸ್ಸೆ ಕೊಟ್ಟಿಲ್ಲ ಎನ್ನುತ್ತಾರೆ. ನಾವು ವಾಂಟಣಿ ಮಾಡಿಕೊಳ್ಳುವ ಕಾಲಕ್ಕೆ ವಾದಿಯರಿಗೆ ವಾಂಟಣಿಯ ವಿಚಾರವನ್ನು ಹೇಳಲಿಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಇದ್ದದ್ದರಿಂದ ನಾವು ವಾಂಟಣಿ ಮಾಡಿಕೊಂಡಿದ್ದೇವೆ. ದಾವೆ ಸಲ್ಲಿಸುವ ಪೂರ್ವದಲ್ಲಿ ವಾದಿಯರು ದಾವಾ ಆಸ್ತಿಗಳಲ್ಲಿ ನಮಗೂ ಭಾಗ ಕೊಡಿ ಎಂದು ಕೇಳಿದ್ದಾರೆ ಎಂದರೆ ಸರಿಯಲ್ಲ. ನಾವು ಭಾಗ ಕೊಡಲು ನಿರಾಕರಿಸಿದ್ದರಿಂದ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಕುಟುಂಬದಲ್ಲಿ ವಾಸವಾಗಿದ್ದ ಎಲ್ಲರ ಪರವಾಗಿ ಫಾರಂ ನಂ.7 ಅರ್ಜಿ ಸಲ್ಲಿಸಿರುವುದರಿಂದ ನಮ್ಮ ತಂದೆಯ ಸಹೋದರರಿಗೂ ಸಹ ದಾವಾ ಆಸ್ತಿಗಳಲ್ಲಿ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಸಲ್ಲಿಸಿದ ಫಾರಂ ನಂ.7 ಅರ್ಜಿಯಲ್ಲಿ

ಕುಟುಂಬದ ಸದಸ್ಯರ ವಿವರವನ್ನು ನಮೂದಿಸಿಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಯರಿಗೂ ಸಹ ಸಮಾನ ಹಕ್ಕು ಇದ್ದು ಅದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**